*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ಹೆಂಡತಿ ವಾರಕ್ಕೆ ಮೂರು ದಿನ ಮೌನವ್ರತ ವಹಿಸಿದರೆ?*



ಹುಷಾರು! ಮೌನೇನ ಕಲಹಂ ಜಾಸ್ತಿ!

*ಎಚ್. ಆರ್. ದೇಸಾಯಿ, ರಾಯಚೂರು*
*ಪ್ರತಿಯೊಬ್ಬ ಮನುಷ್ಯನಿಗೂ ನಾಲ್ಕು ಜನ ಪ್ರೀತಿಸುವವರು, ನಾಲ್ಕು ಜನ ದ್ವೇಷಿಸುವವರು ಯಾಕಿದ್ದಾರೆ?*
ನಾಲ್ಕೂ ದಿಕ್ಕಿಗೆ ಕೊಂಡಾಡಲು, 4 ಜನ ಸೇರಿ ಕೊಂಡೊಯ್ಯಲು!

*ಡಿ. ಎಲ್. ನಾಗರಾಜ್, ಹರಪನಹಳ್ಳಿ*
*ದುಡ್ಡು, ಮನುಷ್ಯ, ಮನುಷ್ಯತ್ವ, ಇವುಗಳಲ್ಲಿ ಯಾವುದಕ್ಕೆ ಬೆಲೆಯಿದೆ?*
ದುಡ್ಡಿರುವ ಮನುಷ್ಯನಲ್ಲಿನ ಮನುಷ್ಯತ್ವಕ್ಕೆ!

*ರಮೇಶ್, ಹನುಮನಾಳು*
*ಪ್ರೇಯಸಿಯ ಜೊತೆ ಹೋದರೆ ಹೆಂಡತಿ ಮುನಿಸಿಕೊಳ್ಳುತ್ತಾಳೆ, ಹೆಂಡತಿಯ ಜೊತೆ ಹೋದರೆ ಪ್ರೇಯಸಿ..?*
ಇನ್ನೊಬ್ಬನನ್ನು ಆರಿಸಿಕೊಳ್ಳುತ್ತಾಳೆ!

*ಎಂ.ಎಸ್. ಧರ್ಮೇಂದ್ರ, ಜಿ.ಟಿ.ಆರ್.ಐ ಕ್ಯಾಂಪಸ್*
*ಪ್ರೇಯಸಿಯ ಕಣ್ಣಿನಲ್ಲಿರುವ ಪವರ್ ಪ್ಲಸ್ ಸೈಟೋ, ಮೈನಸ್ ಸೈಟೋ?*
ಪ್ರೀತಿಯ ಲೆಕ್ಕದಲ್ಲಿ ಪ್ಲಸ್, ಪರ್ಸ್‌ನ ಲೆಕ್ಕದಲ್ಲಿ ಮೈನಸ್!

*ಜಾಕೋಬ್ ಡಿಸೋಜ, ಕುರುವಳ್ಳಿ*
*ಸತ್ಯ ಕೆಲವರಿಗೆ ಕಹಿ. ಏಕೆ ಸಾರ್?*



ಅಸತ್ಯದ ಅಮಲಿನ ಪ್ರಭಾವ.

*ಜೆ.ಸುಬ್ಬನಾಯಕ, ಬೊಮ್ಮಲಾಪುರ*
*ಕಾಣದ ದೇವರಲ್ಲಿ ತೋರುವ ಭಕ್ತಿ ಕಾಣುವ ತಂದೆ-ತಾಯಿಗೇಕೆ ತೋರುವುದಿಲ್ಲ?*
ಆಪ್ತತೆಯಲ್ಲಿ ಅಸಹನೆ ಅಂಕುರಿಸುತ್ತದೆ; ಭೀತಿಯಲ್ಲಿ ಭಕ್ತಿ.

*ಸಾವಿತ್ರಮ್ಮ ಕೆ. ವಿಭೂತಿ, ಹರಿಹರ*
*ಲಂಚ ತೆಗೆದುಕೊಂಡು ಕೆಲಸ ಮಾಡುವವರು ಸ್ವರ್ಗಕ್ಕೆ ಹೋಗುವವರೋ, ನರಕಕ್ಕೆ ಹೋಗುವವರೋ?*
ಎರಡೂ ಅಲ್ಲ, ಸರ್ಕಾರಿ ಕಚೇರಿಗೆ ಹೋಗುವರು.

*ಹೆಚ್.ಎನ್. ವಿಶ್ವನಾಥ್, ಶಿವಮೊಗ್ಗ*
*ಸನ್ಯಾಸಿಯೊಬ್ಬ ಶಿಲ್ಪಾಶೆಟ್ಟಿಯ ಮೂಗು, ಗಲ್ಲಗಳನ್ನು ಆಶೀರ್ವಾದದ ನೆಪದಲ್ಲಿ ಮುಟ್ಟಿದರಲ್ಲಾ?*
ಯಾರೋ ಯಾರನ್ನೋ ಮುಟ್ಟಿದ್ದಕ್ಕೆ ಮೂಗು ತೂರಿಸುವುದು ಸರಿಯಾಗಲ್ಲ ಬಿಡಿ.

*ಶಾಂತಾಬಾಯಿ ಎಂ. ಪೈ, ಹೊನ್ನಾವರ*
*ದೇವರನ್ನು ಎಬ್ಬಿಸಲು ಗಂಟೆ, ರಾಜಕಾರಣಿಗಳನ್ನು ಎಬ್ಬಿಸಲು?*
ಏಕೆ ಎಬ್ಬಿಸುವಿರಿ? ಅವರು ಮಲಗಿದ್ದಾಗ ಮಾತ್ರ ದೇಶಕ್ಕೆ ಕ್ಷೇಮ!

*ಎಸ್.ಎಸ್. ಮಹಾಬಲರಾವ್, ನರಸಿಂಹರಾಜಪುರ*
*ಮಗಳು ಕೇಳಿದ್ದನ್ನೆಲ್ಲಾ ತಂದುಕೊಡುವ ಮಂದಿ ಪ್ರೀತಿಸಿದ ಹುಡುಗನನ್ನು ಏಕೆ ತಂದುಕೊಡುವುದಿಲ್ಲ?*
ಬೇರೆಲ್ಲಾ ವಸ್ತುಗಳು ಮಗಳನ್ನು ಹಾರಿಸಿಕೊಂಡು ಹೋಗುವುದಿಲ್ಲವಲ್ಲಾ..!

*ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ*
*ಎಲ್ಲಾ ಹೆಂಗಸರಿಂದ ಎಂಬುದಕ್ಕೆ ತಾಜಾ ಉದಾಹರಣೆ?*
ಕಾಂಗ್ರೆಸ್ ಪಕ್ಷ.

*ಎ.ಕೆ. ಪಟ್ಟಾಭಿ, ಬೆಂಗಳೂರು*
*ಮುಸಲ್ಮಾನರಲ್ಲಿ ಪ್ರಾರ್ಥನೆ ಎಂದಾಗ ಎಲ್ಲರೂ ಒಟ್ಟುಗೂಡುತ್ತಾರೆ; ಹಿಂದೂಗಳಲ್ಲಿ ಆ ಒಗ್ಗಟ್ಟು ಏಕಿಲ್ಲ?*
ಅಲ್ಲಿ ಒಂದೇ ದೇವರು; ಇಲ್ಲಿ ದೇವರುಗಳ ಬಗ್ಗೆಯೇ ಭಿನ್ನಮತ!

*ಅಭಿಷೇಕ್ ಆರ್ ರೆಡ್ಡಿ, ಗೌರಿಬಿದನೂರು*
*ಮೊನ್ನೆ ಬ್ರಿಗೇಡ್ ರೋಡ್‌ನಲ್ಲಿ ನಡೆಯುತ್ತಿರುವಾಗ ಲಂಡನ್‌ನಲ್ಲಿರುವಂತೆ ಭಾಸವಾಯ್ತು!?*
ನಿಜ. ಮೆಟ್ರೋಗೆಂದು ಅಗೆದಾಗ ಥೇಮ್ಸ್ ನದಿ ಕಂಡಿತ್ತು.

*ಎಸ್. ಶ್ರೀಧರ್, ಬೆಂಗಳೂರು*
*ದುರ್ಜನರ ಸ್ನೇಹ ಮಾಡಿದ ವ್ಯಕ್ತಿ ಏನಾಗುತ್ತಾನೆ?*
ಮಂತ್ರಿ!

## ಬಹುಮಾನಿತ ಪ್ರಶ್ನೆ

*ಗೀತಾ ಬರ್ಲ, ಟಿ.ದಾಸರಹಳ್ಳಿ, ಬೆಂಗಳೂರು*
*ಕಾವಿ ಧರಿಸಿದ ಕಳ್ಳಸ್ವಾಮಿಗಳಿಗೂ, ಬೀದಿ ಕಾಮಣ್ಣರಿಗೂ ಏನು ವ್ಯತ್ಯಾಸ?*
ಕಳ್ಳಸ್ವಾಮಿಗೆ ವಿಮಾನ ಹತ್ತಿಸುತ್ತಾರೆ, ಕಾಮಣ್ಣನಿಗೆ ಏರೋಪ್ಲೇನ್ ಹತ್ತಿಸುತ್ತಾರೆ.

*ಬಿ. ಬಸವರಾಜ್, ಗುಲಬರ್ಗಾ*
*ನಿಜಕ್ಕೂ ಸಾಯುವ ವಯಸ್ಸು ಯಾವುದು?*
ಆತ್ಮಗೌರವ ಯಾವ ವಯಸ್ಸಿನಲ್ಲಿ ಸಾಯುತ್ತದೋ ಅದು!

*ಎನ್. ಪ್ರಕಾಶ್, ದೇವನಹಳ್ಳಿ*
*ಪ್ರತಿಯೊಂದಕ್ಕೂ ಬೆಲೆ ಕಟ್ಟುವ ಭಾರತೀಯರಿಗೆ ಸಮಯದ ಬೆಲೆ ಏಕೆ ಗೊತ್ತಿಲ್ಲ?*
ಅದಕ್ಕೆ ಬೆಲೆ ನಿರ್ಧರಿಸುವಷ್ಟರಲ್ಲಿ ಅದು ಬದಲಾಗಿಬಿಡುವುದರಿಂದ!

*ಜೋನ್, ಜೋಗ್ ಫಾಲ್ಸ್*
*ಯಾವುದಕ್ಕೂ ಹೆದರದ ಹೆಂಗಸರು ಬಿಸಿಲಿಗೆ ಹೆದರಿ ಕೊಡೆ ಹಿಡಿಯುವುದೇಕೆ?*



ರಂಗುರಂಗಿನ ಸೌಂದರ್ಯ wrongಉ wrong ಆಗದಿರಲೆಂದು!

*ಎಂ.ಎಸ್.ಸೋಮಶೇಖರ್, ಮೈಸೂರು*
*ನಾವು ಕಳುಹಿಸುವ ಪ್ರಶ್ನೆಗಳಿಗೆ ಬೆಲೆ ಇದೆಯೋ ಇಲ್ಲವೋ ಖಡಾಖಂಡಿತವಾಗಿ ತಿಳಿಸಿ!*
ಬಹಳವೇ ಪ್ರಶ್ನೆಗಳು ಬರುವುದರಿಂದ ಒಂದು ಕಾರ್ಡಿನ ಒಂದು ಉತ್ತಮ ಪ್ರಶ್ನೆಗೆ ಖಡಾಖಂಡಿತವಾಗಿ ಮಾನ್ಯತೆ, ಬೆಲೆ, ಆದರ, ಸ್ವಾಗತ ಎಲ್ಲವೂ ಇದೆ.

■ ರಾಮ್